ಓ ಎಸ್ ನಂ. 36/2016
ಪಿ ಡಬ್ಲ್ಯೂಃ 1
ದಿನಾಂಕ 08-09-2021 ರಂದು ಪ್ರಮಾಣ ವಚನ ಬೋಧಿಸಲಾಯಿತು.

ಪಾಟೀ ಸವಾಲುಃ 1 ರಿಂದ 3ನೇ ಪ್ರತಿವಾದಿ ಪರಃ ಶ್ರೀ ಹೆಚ್ ಟಿ ವಕೀಲರಿಂದಃ

ನನ್ನ ತಂದೆಗೆ ಇಬ್ಬರು ಹೆಂಡತಿಯರು ಅವರೆಂದರೆ ಹಾಲಮ್ಮ ಮತ್ತು ಸಾವಿತ್ರಮ್ಮ. ನನ್ನ ತಂದೆಗೆ ಒಟ್ಟು 6 ಜನ ಮಕ್ಕಳು. ನನ್ನ ತಂದೆಯ ಎರಡನೇ ಹೆಂಡತಿಯ ಹೆಸರು ಸಾವಿತ್ರಮ್ಮ ಅಲ್ಲ ಶಾಂತಮ್ಮ ಎಂದರೆ ನಿಜ. ಹಾಲಮ್ಮನ ಮಕ್ಕಳೆಂದರೆ ಕೆ ಆರ್ ಲೋಕೇಶಪ್ಪ, ಕೆ ಆರ್ ಶಾಂತಕುಮಾರ್ ಮತ್ತು ನಾನು. ಶಾಂತಮ್ಮನ ಮಕ್ಕಳೆಂದರೆ ಕೆ ಆರ್ ಶೇಖರಪ್ಪ, ಕೆ ಆರ್ ಕಲ್ಲಪ್ಪ ಮತ್ತು ಕೆ ಆರ್ ಗಂಗಾಧರಪ್ಪ. ಪ್ರತಿವಾದಿಗಳು ಶೇಖರಪ್ಪನ ಮಕ್ಕಳು ಎಂದರೆ ನಿಜ. 3 ನೇ ಪ್ರತಿವಾದಿ ಹೆಸರು ಪ್ರದೀಪ ಅಲ್ಲ ಪ್ರವೀಣ್ ಕುಮಾರ್ ಎಂದರೆ ಸರಿಯಲ್ಲ. ಹಾಲಮ್ಮನಿಗೆ ನಾಗರತ್ನ ಸೊಸೆಯಾಗಬೇಕು. ನಾನು ಮತ್ತು ಶಾಂತಕುಮಾರ್ ಮಕ್ಕಳೆಂದರೆ ನಿಜ. ನಾವು ಹಾಲಮ್ಮನ ಮಕ್ಕಳು ಎಂದು ತೋರಿಸಲು ನ್ಯಾಯಾಲಯಕ್ಕೆ ವಂಶವೃಕ್ಷದ ದಾಖಲೆಯನ್ನು ಹಾಜರುಪಡಿಸಿದ್ದೇನೆ. ನಿಪಿ-1 ರಿಂದ 7 ರಲ್ಲಿ ಗುರುತಿಸಿರುವ ದಾಖಲೆಗಳನ್ನು ನನ್ನ ಪರವಾಗಿ ವಕೀಲರು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತಾರೆ. ನಾನು ಹಾಜರುಪಡಿಸಿರುವ ದಾಖಲೆಯಲ್ಲಿ ವಂಶವೃಕ್ಷ ಇಲ್ಲ ಎಂದರೆ ನಿಜ.

ದಾವಾ ಆಸ್ತಿಯನ್ನು ಹೊರತು ಪಡಿಸಿ ನನ್ನ ತಂದೆ ರುದ್ರಪ್ಪನವರ ಕುಟುಂಬಕ್ಕೆ ಬೇರೆ ಆಸ್ತಿಗಳು ಇತ್ತು. ಬೀರೂರಿನಲ್ಲಿ ನಿವೇಶನ ಮತ್ತು ಕತ್ತಲಗೆರೆ ಗ್ರಾಮದಲ್ಲಿ ಜಮೀನು ಇದೆ. ನನ್ನ ತಂದೆಗೆ ಸಂಬಂದಪಟ್ಟಂತೆ ಒಟ್ಟು ಎರಡು ಆಸ್ತಿಗಳು ಇದ್ದವು. ದಾವಾ ಆಸ್ತಿಯು ನನ್ನ ತಾಯಿಗೆ ಸಂಬಂದಪಟ್ಟ ಆಸ್ತಿಗಳಾಗಿವೆ. ನನ್ನ ತಂದೆಗೆ ಸಂಬಂದಪಟ್ಟ ಎರಡು ಆಸ್ತಿಗಳ ಪೈಕಿ ಮನೆ ಕೆ ಆರ್ ಶೇಖರಪ್ಪ ಮತ್ತು ಕೆ ಆರ್ ಗಂಗಾಧರಪ್ಪನವರ

ಹೆಸರಿನಲ್ಲಿವೆ.  ಜಮೀನನ್ನು ನನ್ನ ತಂದೆ ಮತ್ತು ಅವರ ಸಹೋದರರು 1970-71 ರಲ್ಲಿ ಮಾರಾಟ ಮಾಡಿರುತ್ತಾರೆ. ಶೇಖರಪ್ಪ ಮತ್ತು ಗಂಗಾಧರಪ್ಪನವರ ಹೆಸರಿಗೆ ಸುಮಾರು 1970-71 ರಲ್ಲಿ ಆಸ್ತಿ ಹೋಗಿರಬಹುದು. ಅವರ ಹೆಸರಿಗೆ ನನ್ನ ತಂದೆಯೇ ಮಾಡಿಕೊಟ್ಟಿದ್ದಾರೆ. ಯಾವ ಆಧಾರದ ಮೇಲೆ ನನ್ನ ತಂದೆ ಅವರ ಹೆಸರಿಗೆ ಆಸ್ತಿ ಮಾಡಿಕೊಟ್ಟಿದ್ದಾರೆಂದು ನನಗೆ ಗೊತ್ತಿಲ್ಲ.

ಮುಂದುವರೆದ ಪಾಟೀ ಸವಾಲನ್ನು ಕೋರಿಕೆಯ ಮೇರೆಗೆ ಮುಂದೂಡಲಾಯಿತು.

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸ ಇ ಎ ಒ

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರದನ್ಯಾದಂ., ಕಡೂರು.